# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು-572 103

ಸಂಖ್ಯೆ :ತುವಿ:ವಿ.ವಿ.ಪ/ಸಿಂ.ವಿ/2022-23 | 6020 ದಿನಾಂಕ: 28.02.2023

ಇವರಿಗೆ,

ಮಾನ್ಯ ಸಿಂಡಿಕೇಟ್‌ನ ಎಲ್ಲಾ ಸದಸ್ಯರುಗಳಿಗೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಮಾನ್ಯರೆ,

**ವಿಷಯ: 2022-23ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳನ್ನು ಕಳುಹಿಸುತ್ತಿರುವ ಕುರಿತು**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ:10.03.2023ರ ಶುಕ್ರವಾರ ಬೆಳಿಗ್ಗೆ 11:00 ಗಂಟೆಗೆ ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇಲ್ಲಿ ಏರ್ಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಚರ್ಚಿಸಲಿರುವ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ, ಕಳುಹಿಸಲಾಗಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

ಉಪಕುಲಸಚಿವರು
(ಸಿಂಡಿಕೇಟ್/ಶೈಕ್ಷಣಿಕ ಪರಿಷತ್ ವಿಭಾಗ)

**ಅಡಕ:** ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು

**ಪ್ರತಿಗಳು:**

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಚೇರಿ ಪ್ರತಿ.

D:\Vijay (December 2020)\Kannada letter Jan 2021-.docx

# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು- 572 103

**ಸಭಾ ಸಂಖ್ಯೆ: ಸಾ.ಸಿಂ-02** **ದಿನಾಂಕ: 10.03.2023** **ಸಮಯ: ಬೆಳಿಗ್ಗೆ: 11:00**

**2022-23ನೇ ಸಾಲಿನ ದ್ವಿತೀಯ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು**

| ಕ್ರ ಸಂ | ವಿಷಯ ಸಂಖ್ಯೆ | ಕಾರ್ಯಸೂಚಿ ವಿಷಯಗಳು | ಪುಟ ಸಂಖ್ಯೆ |
|---|---|---|---|
| ದಿನಾಂಕ:20.01.2023 ರಂದು ನಡೆದ ಪ್ರಥಮ ಸಾಮಾನ್ಯ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ ಮತ್ತು ದಿನಾಂಕ:14.02.2023 ರಂದು ನಡೆದ ಪ್ರಥಮ ವಿಶೇಷ ಸಿಂಡಿಕೇಟ್ ಸಭಾ ನಡಾವಳಿಗಳ ದೃಢೀಕರಣ | | | |
| ಪರೀಕ್ಷಾ ವಿಭಾಗ | | | |
| 1. | 2022-23:ಸಾ.ಸಿಂ.02: ಪರೀಕ್ಷಾ ವಿಭಾಗ-01 | 2022-23ರ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳ ಪೂರ್ವ ಸಿದ್ಧತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡಿರುವ ಕುರಿತು. | 1 |
| 2. | 2022-23:ಸಾ.ಸಿಂ.01: ಪರೀಕ್ಷಾ ವಿಭಾಗ-02 | ವಿಶ್ವವಿದ್ಯಾನಿಲಯದ ಸ್ನಾತಕ ಶಿಕ್ಷಣ ಪದವಿಯ ಪ್ರಶ್ನೆ ಪತ್ರಿಗಳ ಹಸ್ತ ಪ್ರತಿಗಳ ಕರಡು ಪ್ರತಿಗಳು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಗೊಂಡಿರುವ ಹಿನ್ನಲೆಯಲ್ಲಿ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಎಲ್ಲಾ ಪರೀಕ್ಷಾ ಕಾರ್ಯಗಳ ಸೇವೆಯನ್ನು ರದ್ದುಗೊಳಿಸಿ, ನಿರ್ಬಂಧಿಸಿರುವ ಕುರಿತು. | 2 |
| ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ | | | |
| 3. | 2022-23:ಸಾ.ಸಿಂ.02: ಸಾ&ಅ ವಿಭಾಗ-01 | ಶ್ರೀ ಮಂಜುನಾಥ ಕೆ.ಜೆ., ಐ.ಟಿ. ಕನ್ಸಲ್ಟೆಂಟ್, ಪರೀಕ್ಷಾ ವಿಭಾಗ ಇವರ ಸೇವೆಯನ್ನು ಮುಂದುವರೆಸುವ ಹಾಗೂ ವೇತನ ಹೆಚ್ಚಳದ ಬಗ್ಗೆ ಮನವಿ ಮಾಡಿರುವ ಕುರಿತು. | 3 |
| 4. | 2022-23:ಸಾ.ಸಿಂ.02: ಸಾ&ಅ ವಿಭಾಗ-02 | ಶ್ರೀ ಯೋಗೀಶ್ ಎಂ.ಎಸ್., ಐ.ಟಿ. ಕನ್ಸಲ್ಟೆಂಟ್, ಇವರ ಸೇವೆಯನ್ನು ಮುಂದುವರೆಸುವ ಸಂಬಂಧ ಮನವಿ ಮಾಡಿರುವ ಕುರಿತು. | 4 |
| ಸಿಬ್ಬಂದಿ ವಿಭಾಗ | | | |
| 5. | 2022-23:ಸಾ.ಸಿಂ.02: ಸಿಬ್ಬಂದಿ ವಿಭಾಗ-01 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿ, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು. | 5 |
| 6. | 2022-23:ಸಾ.ಸಿಂ.02: ಸಿಬ್ಬಂದಿ ವಿಭಾಗ-02 | ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಶ್ರೀ ಜೆ.ಹೆಚ್. ತಿಮ್ಮಾರೆಡ್ಡಿ, ಆಹ್ವಾನಿತ ಉಪನ್ಯಾಸಕರು, ಇವರಿಗೆ ಸಂಯೋಜಕರ ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಲು, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು. | 6 |
| ಶೈಕ್ಷಣಿಕ ವಿಭಾಗ | | | |
| 7. | 2022-23:ಸಾ.ಸಿಂ.02: ಶೈ.ವಿ-01 | ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ಕುರಿತು. | 7 |
| 8. | 2022-23:ಸಾ.ಸಿಂ.02: ಶೈ.ವಿ-02 | ತುಮಕೂರು ವಿಶ್ವವಿದ್ಯಾನಿಲಯದ ಎಂ.ಸಿ.ಎ. ವಿಭಾಗದಲ್ಲಿ ಹೆಚ್ಚುವರಿ ಶುಲ್ಕದೊಂದಿಗೆ 20 ಸೀಟುಗಳನ್ನು ಹೆಚ್ಚಿಸುವ ಕುರಿತು. | 8 |

| ವಿಷಯ ಸಂಖ್ಯೆ : | 2022- 23:.ಸಾ.ಸಿಂ.:02: ಪ.ವಿ.: 01: ದಿ.:10.03.2023 |
|---|---|

**ವಿಷಯ:** 2022-23 ರ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳ ಪೂರ್ವ ಸಿದ್ಧತೆಗಾಗಿ ಪರೀಕ್ಷಾ ಮಂಡಳಿಗಳನ್ನು ರಚಿಸಿ ಪರೀಕ್ಷಾ ಕಾರ್ಯಗಳನ್ನು ಕೈಗೊಂಡಿರುವ ಕುರಿತು.

* * * * *

2022-23 ರ ಶೈಕ್ಷಣಿಕ ಸಾಲಿನಲ್ಲಿ ನಡೆಯಲಿರುವ ವಿವಿಧ ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷೆಗಳ ಪರೀಕ್ಷಾ ಮಂಡಳಿಗಳ ರಚನೆಗೆ ಸಂಬಂಧಿಸಿದಂತೆ, ವಿವಿಧ ವಿಷಯಗಳ ಸ್ನಾತಕೋತ್ತರ ಅಧ್ಯಯನ ಮಂಡಳಿಯಿಂದ ಅರ್ಹ ಪರೀಕ್ಷಕರ ಪಟ್ಟಿಯನ್ನು ಪಡೆದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ಪ್ರಕರಣ 36 ರಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಪರೀಕ್ಷಕರ ನೇಮಕಾತಿ ಮಂಡಳಿಯ (**BOAE**) ಸಭೆಗಳನ್ನು ದಿನಾಂಕ: **01.02.2023** ಮತ್ತು **02.02.2023** ನಡೆಸಿ **28** ಪರೀಕ್ಷಾ ಮಂಡಳಿಗಳನ್ನು ಹಾಗೂ **20** ಪಿಹೆಚ್.ಡಿ. ಪ್ರವೇಶ ಪರೀಕ್ಷಾ ಮಂಡಳಿಗಳನ್ನು ರಚಿಸಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಅಧಿಸೂಚನೆಗಳನ್ನು ಹೊರಡಿಸಿ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಸಂಬಂಧ ರಚಿಸಲಾಗಿರುವ ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪ್ರವೇಶ ಪರೀಕ್ಷಾ ಮಂಡಳಿಗಳನ್ನು **ಎರಡನೇಯ ಸಾಮಾನ್ಯ ಸಿಂಡಿಕೇಟ್ ಸಭೆಯ ಮುಂದೆ** ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2022-23: ಸಾ.ಸಿಂ.:02: ಪ.ವಿ.: 02 ದಿ.:10.03.2023 |
|---|---|

**ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕ ಶಿಕ್ಷಣ ಪದವಿಯ ಪ್ರಶ್ನೆ ಪತ್ರಿಕೆಗಳ ಹಸ್ತ ಪ್ರತಿಗಳ ಕರಡು ಪ್ರತಿಗಳು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಗೊಂಡಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಎಲ್ಲಾ ಪರೀಕ್ಷಾ ಕಾರ್ಯಗಳ ಸೇವೆಯನ್ನು ರದ್ದುಗೊಳಿಸಿ, ನಿರ್ಬಂಧಿಸಿರುವ ಕುರಿತು.**

**ಉಲ್ಲೇಖ: 1. ಅಧಿಸೂಚನೆ ಸಂಖ್ಯೆ:ತುವಿ:ಪ.ವಿ:ವಿ.ನಿ-03:2022-23/451 ದಿನಾಂಕ:23.12.2022**
**2. ಪರೀಕ್ಷಾ ಮಂಡಳಿಯ ತುರ್ತು ಸಭೆಯ ನಡಾವಳಿ ದಿನಾಂಕ:22.01.2023**
**3. ಅಧಿಸೂಚನೆ ಸಂಖ್ಯೆ:ತುವಿ:ಪ.ವಿ:2022-23:592 ದಿನಾಂಕ:24.01.2023**
**4. ವಿವಿಧ ನಿಕಾಯಗಳ ಡೀನರ ವಿಚಾರಣಾ ಸಭೆಯ ನಡಾವಳಿ ದಿನಾಂಕ: 25.01.2023**
**5. ವಿ.ವಿ ಕಚೇರಿ ಆದೇಶ ಸಂಖ್ಯೆ:ತುವಿ:ಪ.ವಿ:2022-23:633 ದಿನಾಂಕ: 31.01.2023**
**6. ವಿ.ವಿ ಟಿಪ್ಪಣಿ ಸಂಖ್ಯೆ:ತುವಿ:ಪ.ವಿ:2022-23:633 ದಿನಾಂಕ:02.02.2023**
**7. ಈ ಹಿಂದಿನ ಪರೀಕ್ಷಾ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರು ಸಲ್ಲಿಸಿರುವ ಮನವಿ ಪತ್ರ ದಿನಾಂಕ:09.02.2023**

* * * * * * *

ದಿನಾಂಕ:27.01.2023 ರಿಂದ ಪ್ರಾರಂಭವಾಗಬೇಕಾಗಿದ್ದ ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕ ಶಿಕ್ಷಣ ಪದವಿಯ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳ ಪ್ರಶ್ನೆಪತ್ರಿಕೆಯ ಹಸ್ತಪ್ರತಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿರುವ ಪ್ರಕರಣದ ಸಂಬಂಧ ಉಲ್ಲೇಖ(2) ರಲ್ಲಿ ಪರೀಕ್ಷಾ ಮಂಡಳಿಯ ಸಭೆಯನ್ನು ಕರೆದು ಪ್ರಾಥಮಿಕ ವರದಿಯನ್ನು ಸಿದ್ಧಪಡಿಸಲಾಗಿರುತ್ತದೆ. ಉಲ್ಲೇಖ(3) ರಲ್ಲಿ ರಚಿಸಲಾಗಿದ್ದ ವಿಚಾರಣಾ ಸಮಿತಿಯು ದಿನಾಂಕ:25.01.2023 ರಂದು **ಬೆಳಿಗ್ಗೆ 11.00 ಗಂಟೆಗೆ ಪರೀಕ್ಷಾಂಗ ಕುಲಸಚಿವರ ಅಧ್ಯಕ್ಷತೆಯಲ್ಲಿ ನಡೆದ ಡೀನರ ವಿಚಾರಣಾ ಸಮಿತಿ ಸಭೆಯು ಉಲ್ಲೇಖ (4) ರಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.**

1. ಪರೀಕ್ಷಾ ಕಾರ್ಯಗಳ ಗೌಪ್ಯತೆಯನ್ನು ಕಾಪಾಡದೇ, ಪರೀಕ್ಷಾ ಕಾರ್ಯಗಳ ಲೋಪವೆಸಗಿರುವ ಹಿನ್ನೆಲೆಯಲ್ಲಿ, 2022-23ನೇ ಸಾಲಿಗೆ ರಚಿಸಲಾಗಿದ್ದ ಸ್ನಾತಕ ಶಿಕ್ಷಣ ಪರೀಕ್ಷಾ ಮಂಡಳಿಯ ಸಮಿತಿಯನ್ನು ಐದು ವರ್ಷಗಳ ಅವಧಿಗೆ ವಿಶ್ವವಿದ್ಯಾನಿಲಯದ ಎಲ್ಲಾ ಪರೀಕ್ಷಾ ಕಾರ್ಯಗಳಿಂದ ರದ್ದುಗೊಳಿಸಲು ಶಿಫಾರಸ್ಸು ಮಾಡಿತು.
2. ದಿನಾಂಕ 27.01.2023 ರಿಂದ ಪ್ರಾರಂಭವಾಗಬೇಕಾಗಿದ್ದ ಸ್ನಾತಕ ಶಿಕ್ಷಣ ಪರೀಕ್ಷೆಗಳಿಗೆ ಸಂಬಂಧಿಸಿದ ಎಲ್ಲಾ ಒಟ್ಟು ಖರ್ಚು-ವೆಚ್ಚಗಳನ್ನು ಸದರಿ ಪರೀಕ್ಷಾ ಮಂಡಳಿಯು ಭರಿಸುವಂತೆ ಕ್ರಮವಹಿಸಲು ಶಿಫಾರಸ್ಸು ಮಾಡಿತು.
3. ಶ್ರೀ ಕುಮಾರಸ್ವಾಮಿ ಟಿ.ಪಿ., ಅತಿಥಿ ಉಪನ್ಯಾಸಕರು, ಕೆ.ಎಸ್.ಐ.ಎಫ್. ಶಿಕ್ಷಣ ಕಾಲೇಜು, ತುಮಕೂರು ಇವರನ್ನು ಐದು ವರ್ಷಗಳ ಅವಧಿಗೆ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಡೆಸುವ ಎಲ್ಲಾ ಪರೀಕ್ಷಾ ಕಾರ್ಯಗಳಿಂದ ರದ್ದುಗೊಳಿಸಲು ಶಿಫಾರಸ್ಸು ಮಾಡಿತು.
4. 2022-23ನೇ ಸಾಲಿಗೆ ಸ್ನಾತಕ ಶಿಕ್ಷಣ ಪರೀಕ್ಷಾ ಮಂಡಳಿಯನ್ನು ಪುನರ್ ರಚಿಸಿ, ತುರ್ತಾಗಿ ಸ್ನಾತಕ ಶಿಕ್ಷಣ ಪರೀಕ್ಷೆಗಳನ್ನು ನಡೆಸಲು ಕ್ರಮವಹಿಸುವಂತೆ ಶಿಫಾರಸ್ಸು ಮಾಡಿತು.
5. ಸದರಿ ಪ್ರಕರಣವು ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಬರುವಂತಹ ಪ್ರಕರಣವಾಗಿದ್ದು, ಇನ್ನು ಮುಂದೆ ಎಲ್ಲಾ ಪರೀಕ್ಷಾ ಕಾರ್ಯಗಳ ಪ್ರಕ್ರಿಯೆಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಘಟಕಗಳು ಹಾಗೂ ಕಾಲೇಜುಗಳ ಹಂತದಲ್ಲಿ ಬಹಳ ಕಟ್ಟುನಿಟ್ಟಾಗಿ ನಡೆಸುವಂತೆ ಸೂಚಿಸಲಾಯಿತು.
6. ಇನ್ನು ಮುಂದೆ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳ ಹಂತದಲ್ಲಿ ನಡೆಸುವ ಪರೀಕ್ಷಾ ಕಾರ್ಯಗಳಲ್ಲಿ (ಪರೀಕ್ಷಾ ಘಟಕಗಳನ್ನೊಳಗೊಂಡಂತೆ) ಯಾವುದೇ ಅಧ್ಯಾಪಕರುಗಳು ಅಥವಾ ಸಿಬ್ಬಂದಿಗಳು ಮೊಬೈಲ್‌ಗಳನ್ನು ಕಡ್ಡಾಯವಾಗಿ ಬಳಸದಂತೆ ಕ್ರಮವಹಿಸಲು ಶಿಫಾರಸ್ಸು ಮಾಡಿತು.

**ವಿವಿಧ ನಿಕಾಯಗಳ ಡೀನರು ಸಲ್ಲಿಸಿರುವ ಶಿಫಾರಸ್ಸಿನನ್ವಯ ಸಿಂಡಿಕೇಟ್ ಸಭೆಯ ಸ್ಥಿರೀಕರಣವನ್ನು ಕಾಯ್ದಿರಿಸಿ ಉಲ್ಲೇಖ(5) ರಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

- ❖ 2022-23 ನೇ ಶೈಕ್ಷಣಿಕ ಸಾಲಿಗೆ ಉಲ್ಲೇಖ (1) ರಲ್ಲಿ ಅಧಿಸೂಚಿಸಿರುವ ಸ್ನಾತಕ ಶಿಕ್ಷಣ ಪದವಿಯ ಪರೀಕ್ಷಾ ಮಂಡಳಿಯನ್ನು ದಿನಾಂಕ:25.01.2023 ರಿಂದ ಪೂರ್ವಾನ್ವಯವಾಗುವಂತೆ ರದ್ದುಗೊಳಿಸಲಾಗಿದೆ.
- ❖ ಉಲ್ಲೇಖ (4) ರ ವಿವಿಧ ನಿಕಾಯಗಳ ಡೀನರ ವಿಚಾರಣಾ ಸಭೆಯ ನಡಾವಳಿ ದಿನಾಂಕ 25.01.2023 ರಂತೆ ಮುಂದಿನ ಆದೇಶದವರೆಗೆ ಉಲ್ಲೇಖ(1) ರ ಈ ಹಿಂದಿನ ಪರೀಕ್ಷಾ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಮುಂದಿನ ಎಲ್ಲಾ ಪರೀಕ್ಷಾ ಕಾರ್ಯಗಳಿಂದ ನಿಷೇಧಿಸಲಾಗಿದೆ ಹಾಗೂ ಇತರೆ ವಿಷಯಗಳನ್ನು ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಸಿಂಡಿಕೇಟ್ ಸಭೆಯ ಅಂತಿಮ ನಿರ್ಣಯದಂತೆ ಆದೇಶಿಸಲಾಗುವುದು.
- ❖ ಶ್ರೀ ಕುಮಾರಸ್ವಾಮಿ ಟಿ ಪಿ., ಅತಿಥಿ ಉಪನ್ಯಾಸಕರು, ಕೆ.ಎಸ್.ಐ.ಎಫ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು ಇವರನ್ನು ತುಮಕೂರು ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಡೆಸುವ ಮುಂದಿನ ಎಲ್ಲಾ ಪರೀಕ್ಷಾ ಕಾರ್ಯಗಳಿಂದ ನಿಷೇಧಿಸಲಾಗಿದೆ.
- ❖ ದಿನಾಂಕ:27.01.2023 ರಿಂದ ಪ್ರಾರಂಭವಾಗಬೇಕಾಗಿದ್ದ ಸ್ನಾತಕ ಶಿಕ್ಷಣ ಪದವಿಯ ಎರಡು ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳನ್ನು ಮುಂದೂಡಿ, ಪ್ರಶ್ನೆ ಪತ್ರಿಕೆಗಳನ್ನು ಮರು ಸಿದ್ಧಪಡಿಸುವ ಸಂಬಂಧ ತಗುಲುವ ಒಟ್ಟು ಖರ್ಚು-ವೆಚ್ಚವಾದ (ಪ್ರಶ್ನೆ ಪತ್ರಿಕೆ ಮುದ್ರಣ, ಪ್ರಶ್ನೆ ಪತ್ರಿಕೆ ಸರಬರಾಜು ವೆಚ್ಚ, ಹಾಗೂ ಇತರೆ ಪರೀಕ್ಷಾ ವೆಚ್ಚಗಳು) ಅಂದಾಜು ರೂ. 1,50,000/- (ರೂಪಾಯಿ ಒಂದು ಲಕ್ಷದ ಐವತ್ತು ಸಾವಿರ ಮಾತ್ರ) ಗಳನ್ನು ಉಲ್ಲೇಖ(1) ರಲ್ಲಿ ಅಧಿಸೂಚಿಸಲಾಗಿದ್ದ ಪರೀಕ್ಷಾ ಮಂಡಳಿಯು ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರ ಪರೀಕ್ಷಾ ಖಾತೆ ಸಂಖ್ಯೆ: 36954908103 ಗೆ ಪಾವತಿಸಿ, ಮಾಹಿತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಸಲ್ಲಿಸುವುದು.

ಉಲ್ಲಖ (5) ರಲ್ಲಿ ಶ್ರೀ ಕುಮಾರಸ್ವಾಮಿ ಟಿ ಪಿ., ಅತಿಥಿ ಉಪನ್ಯಾಸಕರು ಇವರ ವಿರುದ್ಧ ಕೂಡಲೇ ಸೂಕ್ತ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸಲು ಪ್ರಾಂಶುಪಾಲರು, ಕೆ.ಎಸ್.ಇ.ಎಫ್ ಶಿಕ್ಷಣ ಮಹಾವಿದ್ಯಾಲಯ, ತುಮಕೂರು ಇವರಿಗೆ ಸೂಚಿಸಲಾಗಿರುತ್ತದೆ. ಆದರೆ ಈವರೆವಿಗೂ ಕ್ರಮ ಕೈಗೊಂಡಿರುವ ಕುರಿತು ಯಾವುದೇ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.

ಉಲ್ಲೇಖ(6) ರಲ್ಲಿ ಈ ಹಿಂದಿನ ಪರೀಕ್ಷಾ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರುಗಳು ಮನವಿ ಪತ್ರವನ್ನು ಸಲ್ಲಿಸಿ, ಪ್ರಶ್ನೆ ಪತ್ರಿಕೆ ಸೋರಿಕೆಯ ಪ್ರಕರಣದಲ್ಲಿ ಸ್ನಾತಕ ಶಿಕ್ಷಣ ಪರೀಕ್ಷಾ ಮಂಡಳಿಯ ಯಾವುದೇ ಪಾತ್ರವಿಲ್ಲ ಹಾಗೂ ಇದಕ್ಕೆ ತಾನೇ ಜವಾಬ್ದಾರನೆಂದು ಮೌಖಿಕವಾಗಿ ಮತ್ತು ಲಿಖಿತ ರೂಪದಲ್ಲಿ ಹೇಳಿಕೆ ನೀಡಿರುವ ಶ್ರೀ ಕುಮಾರಸ್ವಾಮಿ ಟಿ ಪಿ., ಅತಿಥಿ ಉಪನ್ಯಾಸಕರು ರವರೇ ವಿಶ್ವವಿದ್ಯಾನಿಲಯ ವಿಧಿಸಿದ ದಂಡ ಶುಲ್ಕ ಮೊತ್ತ ರೂ. 1,50,000/– ಗಳನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿರುತ್ತಾರೆ. ಆದ್ದರಿಂದ ಈ ಹಿಂದಿನ ವಿಚಾರಣಾ ಸಭೆಯ ನಡಾವಳಿಗಳನ್ನು ಪುನರ್ ಪರಿಶೀಲಿಸಿ ಸ್ನಾತಕ ಶಿಕ್ಷಣ ಪರೀಕ್ಷಾ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಸ್ನಾತಕ ಶಿಕ್ಷಣ ಪದವಿಯ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಪರೀಕ್ಷೆಗಳ ಪ್ರಶ್ನೆಪತ್ರಿಕೆಯ ಹಸ್ತಪ್ರತಿ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ವಿವಿಧ ನಿಕಾಯಗಳ ಡೀನರು ಸಲ್ಲಿಸಿರುವ ಶಿಫಾರಸ್ಸಿನನ್ವಯ ಸಿಂಡಿಕೇಟ್ ಸಭೆಗಳ ಅಂತಿಮ ತೀರ್ಮಾನವನ್ನು ಕಾಯ್ದಿರಿಸಿ ವಿಶ್ವವಿದ್ಯಾನಿಲಯ ಕೈಗೊಂಡಿರುವ ಕ್ರಮ ಹಾಗೂ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಚರ್ಚಿಸುವ ಸಂಬಂಧ. ಈ ವಿಷಯವನ್ನು **ಎರಡನೇ ಸಾಮಾನ್ಯ ಸಿಂಡಿಕೇಟ್ ಸಭೆಯ** ಮುಂದೆ ಚರ್ಚೆ ಹಾಗೂ ನಿರ್ಣಯ ಕೋರಿ ಮಂಡಿಸಲಾಗಿದೆ.

| ವಿಷಯ ಸಂಖ್ಯೆ | 2022–23 ಸಾ.ಸಿ:02:ಸಾ&ಅ: 01/ದಿನಾಂಕ:10.03.2023 |
|---|---|

**ವಿಷಯ:ಮಂಜುನಾಥ ಕೆ ಜೆ, ಐ.ಟಿ ಕನ್ಸಲ್ಟೆಂಟ್, ಪರೀಕ್ಷಾ ವಿಭಾಗ ಇವರ ಸೇವೆಯನ್ನು ಮುಂದುವರೆಸುವ ಹಾಗೂ ವೇತನ ಹೆಚ್ಚಳದ ಬಗ್ಗೆ ಮನವಿ ಮಾಡಿರುವ ಕುರಿತು.**

* * * * *

ಮೇಲ್ಕಂಡ ವಿಷಯಕ್ಕೆ ಸಂಬಮಧಿಸಿದಂತೆ, ದಿನಾಂಕ 09.02.2023ರ ಮನವಿಯಲ್ಲಿ ಮಂಜುನಾಥ ಕೆಜೆ ಇವರು ದಿನಾಂಕ:02.03.2022 ರಿಂದ 11 ತಿಂಗಳ ಅವಧಿಗೆ ದಿನಂಕ:06.05.2022 ರ ವಿವಿ ಆದೇಶದಲ್ಲಿ ಪರೀಕ್ಷಾ ವಿಭಾಗದಲ್ಲಿ ಐ.ಟಿ ಕನ್ಸಲ್ಟಂಟ್ ಆಗಿ ಮುಂದುವರೆಸಿ ಆದೇಶಿಸಿಲಾಗಿರುತ್ತದೆ ಪ್ರಸ್ತುತ ಸದರಿ ಅವಧಿಯು ದಿನಾಂಕ:01.02.2023 ಕ್ಕೆ ಮುಕ್ತಾಯಗೊಂಡಿರುತ್ತದೆ. ಆದುದರಿಂದ ನನ್ನ ಸೇವಾ ಅವಧಿಯನ್ನು ಮುಂದಿನ 11 ತಿಂಗಳ ಅವಧಿಗೆ ವಿಸ್ತರಿಸಿಕೊಡಬೇಕಾಗಿ ಮನವಿ ಮಾಡಿರುತ್ತಾರೆ. ಇವರ ಕಾರ್ಯನಿರ್ವಹಣಾ ವರದಿಯನ್ನು(ಕಾರ್ಯಭಾರದ ವಿವರ) ಸಲ್ಲಿಸಿದ್ದು, ಸದರಿಯವರು 2015 ರಿಂದ ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಾಹೆಯಾನ ರೂ.40,000/- ಪಾವತಿಸಲಾಗುತ್ತಿದೆ. ಈ ಮೊದಲು ಮಾಹೆಯಾನ ರೂ.35,000/- ಪಾವತಿಸುತ್ತಿದು, ಮಾಹೆಯಾನ ರೂ.10,000/-ಗಳನ್ನು ಹೆಚ್ಚಿಸಬೇಕೆಂದು ಕೋರಿದ್ದು, ದಿನಾಂಕ 01.12.2021 ರ ವಿ ವಿ ಆದೇಶದಲ್ಲಿ ದಿನಾಂಕ:12.11.2021 ರಿಂದ ಮಾಹೆಯಾನ ರೂ.40,000/-ಕ್ಕೆ ಹೆಚ್ಚಿಸಿ ವೇತನ ನೀಡಲಾಗುತ್ತಿದೆ.

ಮಾನ್ಯ ಕುಲಸಚಿವರು (ಪರೀಕ್ಷಾಂಗ) ಸದರಿಯವರ ಮನವಿಯನ್ನು ಮುಂದಿನ ಕ್ರಮಕ್ಕಾಗಿ ಎಂದು ಶಿಫಾರಸ್ಸು ಮಾಡಿದ್ದು, ಇವರ ಸೇವೆಯು ದಿನಾಂಕ:01.02.2023 ಕ್ಕೆ ಮುಗಿದಿರುತ್ತದೆ. ದಿನಾಂಕ:02.02.2023 ರ ಒಂದು ದಿನ ಸೇವೆಯನ್ನು ಭಂಗಗೊಳಿಸಿ ದಿನಾಂಕ:03.02.2023 ರಿಂದ ಪೂರ್ವಾನ್ವಯವಾಗುವಂತೆ ಮಾಹೆಯನ ವೇತನ ರೂ.40,000/-ಗಳಂತೆ ಮುಂದಿನ 11 ತಿಂಗಳ ಅವಧಿಗೆ ಇವರ ಸೇವೆಯನ್ನು ಮುಂದುವರೆಸುವ ಹಾಗೂ ವೇತನ ಹೆಚ್ಚಳದ ಮನವಿಯ ಕುರಿತು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 ಸಾ.ಸಿ:02:ಸಾ&ಅ: 02/ದಿನಾಂಕ:10.03.2023 |
|---|---|

**ವಿಷಯ: ಯೋಗೀಶ್ ಎಂ ಎಸ್, ಐ.ಟಿ. ಕನ್ಸ ಲ್ಟೆಂಟ್ ಇವರ ಸೇವೆಯನ್ನು ಮುಂದುವರೆಸುವ ಸಂಬಂಧ ಮನವಿ ಮಾಡಿರುವ ಕುರಿತು.**

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 13.02.2023ರ ಮನವಿಯಲ್ಲಿ ಯೋಗೀಶ್ ಎಂ ಎಸ್ ಇವರು ದಿನಾಂಕ:21.04.2022 ರಿಂದ 11 ತಿಂಗಳ ಅವಧಿಗೆ ಮಾಹೆಯಾನ ರೂ.35,000/-ಗಳ ವೇತನದೊಂದಿಗೆ ದಿನಂಕ:03.06.2022 ರ ವಿ ವಿ ಆದೇಶದಲ್ಲಿ ವಿಶ್ವವಿದ್ಯಾನಿಯದಲ್ಲಿ ಐ ಟಿ ಕನ್ಸಲ್ಟಂಟ್ ಆಗಿ ಮುಂದುವರೆಸಿ ಆದೇಶಿಸಿಲಾಗಿರುತ್ತದೆ. ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಗಣಕಯಂತ್ರ ಕೇಂದ್ರ/ಐಸಿಟಿ ಸೆಲ್, ವಿ ವಿ ವೆಬ್ ಸೈಟ್, ಸ್ನಾತಕೋತ್ತರ ವಿಭಾಗದ, ವಿವಿ ಘಟಕ ಕಾಲೇಜುಗಳ, ಕ್ಯಾಂಪಸ್ ನೆಟ್‌ವರ್ಕ್, ಮತ್ತು ಕಂಪ್ಯೂಟರ್ ರಿಪೇರಿಗೆ ಸಂಬಂಧಿಸಿದಂತೆ ಎಲ್ಲಾ ಕೆಲಸಗಳನ್ನು, ಸ್ನಾತಕೋತ್ತರ ವಿಭಾಗಗಳ ಆನ್‌ಲೈನ್ ಅಡ್ಮಿಶನ್(UUCMS) ಹಾಸ್ಟೆಲ್‌ಗಳ ಮತ್ತು ಸಿಸಿ ಟಿವಿಗಳ ನಿರ್ವಹಣೆ ಕೆಲಸವನ್ನು ಮಾಡುತ್ತೇನೆ ಎಂದು ಮನವಿ ಪತ್ರದಲ್ಲಿ ತಿಳಿಸಿರುತ್ತಾರೆ. ಪ್ರಸ್ತುತ ಸದರಿಯವರ ಅವಧಿಯು ದಿನಾಂಕ:20.03.2023 ಕ್ಕೆ ಮುಕ್ತಾಯಗೊಂಡಿರುತ್ತದೆ. ಆದುದರಿಂದ ನನ್ನ ಸೇವಾ ಅವಧಿಯನ್ನು ಮುಂದಿನ 11 ತಿಂಗಳ ಅವಧಿಗೆ ವಿಸ್ತರಿಸಿಕೊಡಬೇಕಾಗಿ ಮನವಿ ಮಾಡಿರುತ್ತಾರೆ. ಇವರು ಜನವರಿ-2023 ರ ಮಾಹೆಯ ಕಾರ್ಯನಿರ್ವಹಣಾ ವರದಿಯನ್ನು (ಕಾರ್ಯಭಾರದ ವಿವರ) ಸಲ್ಲಿಸಿದ್ದು, ಸದರಿಯವರು 2017 ರಿಂದ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಾಹೆಯಾನ ರೂ.35,000/- ಪಾವತಿಸಲಾಗುತ್ತಿದೆ.

ಸಿಸ್ಟಂ ಅನಾಲಿಸ್ಟ್ ಇವರು ಸದರಿಯವರ ಸೇವೆಯನ್ನು ಮುಂದುವರೆಸಬಹುದಾಗಿರುತ್ತದೆ ಎಂದು ಶಿಫಾರಸ್ಸು ಮಾಡಿದ್ದು, ಇವರ ಸೇವೆಯು ದಿನಾಂಕ:20.03.2023 ಕ್ಕೆ ಮುಗಿಯುತ್ತದೆ. ದಿನಾಂಕ:21.03.2023ರ ಒಂದು ದಿನದ ಸೇವೆಯನ್ನು ಭಂಗಗೊಳಿಸಿ ದಿನಾಂಕ:22.03.2023ರಿಂದ ಅನ್ವಯವಾಗುವಂತೆ 11 ತಿಂಗಳ ಅವಧಿಗೆ ಮಾಹೆಯನ ವೇತನ ರೂ.35,000/- ಗಳಂತೆ ಇವರ ಸೇವೆಯನ್ನು ಮುಂದುವರೆಸುವ ಕುರಿತು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

| | |
|---|---|
| ವಿಷಯ ಸಂಖ್ಯೆ | 2022–23/ಸಾ.ಸಿಂ–02:ಸಿಬ್ಬಂದಿ–01ದಿನಾಂಕ:10.03.2023 |

**ವಿಷಯ:–ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸಿ, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಡಾ. ಗಿರೀಶ್ ಕೆ. ಎಸ್. ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ವಿಭಾಗದ ಅಧ್ಯಕ್ಷರನ್ನಾಗಿ ದಿನಾಂಕ:05.02.2021 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಿ ದಿನಾಂಕ:05.02.2021 ರ ಕಚೇರಿ ಆದೇಶದಲ್ಲಿ ಆದೇಶಿಸಲಾಗಿತ್ತು.

ಪ್ರಸ್ತುತ, ದಿನಾಂಕ:10.02.2023ರ ಕಚೇರಿ ಆದೇಶದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(5)ರನ್ವಯ ದಿನಾಂಕ: 10.02.2023ರಿಂದ ಜಾರಿಗೆ ಬರುವಂತೆ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಡಾ. ಮನೋಹರ್ ಶಿಂಧೆ, ಪ್ರಾಧ್ಯಾಪಕರು, ಇವರನ್ನು ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿ, ಆದೇಶಿಸಿರುವುದನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022-23/ಸಾ.ಸಿಂ-02:ಸಿಬ್ಬಂದಿ-02 ದಿನಾಂಕ:10.03.2023 |
|---|---|

**ವಿಷಯ:- ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಶ್ರೀ. ಜೆ. ಹೆಚ್. ತಿಮ್ಮಾರೆಡ್ಡಿ, ಆಹ್ವಾನಿತ ಉಪನ್ಯಾಸಕರು, ಇವರಿಗೆ ಸಂಯೋಜಕರ ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಲು, ಆದೇಶಿಸಿರುವುದನ್ನು ಸ್ಥಿರೀಕರಿಸುವ ಕುರಿತು.**

*****

ವಿಶ್ವವಿದ್ಯಾಲಯದ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಸಂಯೋಜಕರನ್ನಾಗಿ ಡಾ. ಆಸಿಯಾ ನುಜ್ಹತ್ ಎಫ್. ಬಿ. ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಪ್ರಾಣಿಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರನ್ನು ದಿನಾಂಕ:22.10.2021 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕಮಾಡಿ ದಿನಾಂಕ:22.10.2021ರ ಕಚೇರಿ ಆದೇಶದಲ್ಲಿ ಆದೇಶಿಸಲಾಗಿತ್ತು.

ಮುಂದುವರೆದು, ಶ್ರೀ ಸಿದ್ದಾರ್ಥ ಪ್ರಥಮ ದರ್ಜೆ ಕಾಲೇಜಿನಲ್ಲಿ 36 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ಶ್ರೀ. ಜೆ. ಹೆಚ್. ತಿಮ್ಮಾರೆಡ್ಡಿ, ಸಹ ಪ್ರಾಧ್ಯಾಪಕರು., ಇವರನ್ನು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಆಹ್ವಾನಿತ ಉಪನ್ಯಾಸಕರನ್ನಾಗಿ ವಿ.ವಿ.ಆದೇಶ ಸಂಖ್ಯೆ:ತುವಿ:ಸಾ&ಅ:ಸ್ನಾ.ಅ.ಉ.ನೇ:2022-23/4910 ದಿ:16.01.2023 ರಲ್ಲಿ ನೇಮಿಸಲಾಗಿರುತ್ತದೆ.

ಪ್ರಸ್ತುತ, ದಿನಾಂಕ:01.02.2023ರ ಕಚೇರಿ ಆದೇಶದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(5)ರನ್ವಯ ದಿನಾಂಕ:01.02.2023ರಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಶ್ರೀ. ಜೆ. ಹೆಚ್. ತಿಮ್ಮಾರೆಡ್ಡಿ, ಆಹ್ವಾನಿತ ಉಪನ್ಯಾಸಕರು, ಇವರಿಗೆ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಂಯೋಜಕರ ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಲು, ಆದೇಶಿಸಿರುವುದನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 : ಸಾ.ಸಿಂ.: 02 : ಶೈವಿ : 01 ದಿನಾಂಕ: 10.03.2023 |
|---|---|

ವಿಷಯ: ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯೂಬೇಷನ್ ಸೆಂಟರ್ ಸ್ಥಾಪಿಸುವ ಕುರಿತು.

***

ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ವಿದ್ಯಾರ್ಥಿಗಳಿಗೆ ಕೌಶಲ್ಯಾಧಾರಿತ ಶಿಕ್ಷಣ ನೀಡುವುದು ಅಗತ್ಯವಾಗಿದೆ. ಪದವಿಯ ಜೊತೆಗೆ ವಿದ್ಯಾರ್ಥಿಗಳಿಗೆ ಸ್ವಯಂ ಉದ್ಯೋಗ, ಕೌಶಲ್ಯ ಹಾಗೂ ಆವಿಷ್ಕಾರಕ್ಕೆ ಪೂರಕ ವಾತಾವರಣ ನಿರ್ಮಿಸುವುದು ಶಿಕ್ಷಣ ಸಂಸ್ಥೆಯ ಕರ್ತವ್ಯವಾಗಿದೆ. ವಿವಿಧ ಮೌಲ್ಯಾಂಕನ ಸಂಸ್ಥೆಗಳು ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯುಬೇಷನ್ ಕೇಂದ್ರವಿದ್ದಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತವೆ. ಇದಕ್ಕೆ ಪೂರಕವಾಗಿ ವಿಶ್ವವಿದ್ಯಾನಿಲಯದ Academic Reforms Committee ಶಿಫಾರಸ್ಸು ನೀಡಿದೆ. ಸದರಿ ವರದಿಯ ಕುರಿತಾಗಿ ಚರ್ಚಿಸಲು ಡೀನರನ್ನೊಳಗೊಂಡಂತೆ ನಡೆದ ಸಭೆಯ ನಡಾವಳಿಯಂತೆ ವಿಶ್ವವಿದ್ಯಾನಿಲಯದಲ್ಲಿ ಇನ್‌ಕ್ಯುಬೇಷನ್ ಸೆಂಟರ್ ಸ್ಥಾಪಿಸುವ ಸಂಬಂಧ ಹಾಗೂ ಇಂಡಸ್ಟ್ರಿ ಹಿನ್ನೆಲೆಯುಳ್ಳ ಸಂಪನ್ಮೂಲ ವ್ಯಕ್ತಿಯೊಬ್ಬರನ್ನು ಕನ್ಸಲ್ಟೆನ್ಸಿ/ಗೌರವ ಸಂಭಾವನೆ ಪಾವತಿಸಿ ಇನ್‌ಕ್ಯುಬೇಷನ್ ಸೆಂಟರ್‌ಗೆ ನಿಯೋಜಿಸುವ ಸಂಬಂಧ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

| ವಿಷಯ ಸಂಖ್ಯೆ | 2022–23 : ಸಾ.ಸಿಂ.: 02 : ಶೈವಿ : 02 ದಿನಾಂಕ: 10.03.2023 |
|---|---|

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಎಂ.ಸಿ.ಎ ವಿಭಾಗದಲ್ಲಿ ಹೆಚ್ಚುವರಿ ಶುಲ್ಕದೊಂದಿಗೆ 20 ಸೀಟುಗಳನ್ನು ಹೆಚ್ಚಿಸುವ ಕುರಿತು.**

***

ತುಮಕೂರು ವಿಶ್ವವಿದ್ಯಾನಿಲಯದ ಎಂ.ಸಿ.ಎ ವಿಭಾಗದಲ್ಲಿ ಈಗಾಗಲೇ 30 ಅನುಮೋದಿತ ಸೀಟುಗಳಿದ್ದು, ಕೆಇಎ ಮೂಲಕ 21 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಇನ್ನೂ ಅಧಿಕ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶಾತಿ ಬಯಸಿ ಅರ್ಜಿ ಸಲ್ಲಿಸುತ್ತಿರುವುದರಿಂದ ಹಾಗೂ ಕೆಇಎ ಪ್ರವೇಶಾತಿಗೆ ಕರ್ನಾಟಕದಲ್ಲಿಯೇ ಕನಿಷ್ಠ 7 ವರ್ಷಗಳ ಕಾಲ ವಿದ್ಯಾಭ್ಯಾಸವನ್ನು ಕಡ್ಡಾಯಗೊಳಿಸಿದ್ದು, ಆದರೆ ಇತರೆ ರಾಜ್ಯಗಳ ವಿದ್ಯಾರ್ಥಿಗಳೂ ಪ್ರವೇಶ ಬಯಸಿ ಅರ್ಜಿ ಸಲ್ಲಿಸುತ್ತಿರುವುದರಿಂದ ಪ್ರಸ್ತುತ ಇರುವ ರೂ. 51310/– ಶುಲ್ಕಕ್ಕೆ ಹೆಚ್ಚುವರಿ ಶುಲ್ಕದೊಂದಿಗೆ, ಹೆಚ್ಚುವರಿ 20 ಸೀಟುಗಳನ್ನು ನೀಡುವ ಸಂಬಂಧ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.